ಈಗಾಗಲೇ ಅವರು 10 ಕೋಟಿ ರೂಪಾಯಿಗಳನ್ನು ಆಡ್ವಾನ್ಸ್ ಆಗಿ ಕೊಟ್ಟಿದ್ದಾರೆ. ಪವರ್‌ಲೂಮ್ ಮತ್ತು ಹ್ಯಾಂಡ್‌ಲೂಮ್‌ಗೆ ಎರಡಕ್ಕೂ ನಾವು ಹಣವನ್ನು ಕೊಟ್ಟಿದ್ದೇವೆ. ಈಗ ಅವರು ಕಳವಳವನ್ನು ವ್ಯಕ್ತಪಡಿಸಿದ್ದಾರೆ. ವರ್ಷೇ ವರ್ಷೇ ಇದೇ ಪರಿಸ್ಥಿತಿ ಮುಂದುವರಿಯಬಾರದು, ಒಂದು ಸಾರಿ ಕೊಡಬೇಕೆನ್ನುವುದು, ಒಂದು ಸಾರಿ ತಪ್ಪಿಸಬೇಕೆನ್ನುವುದು ಈ ರೀತಿಯಾದರೆ ಬಡ ನೇಕಾರರಿಗೆ ತೊಂದರೆಯಾಗುತ್ತದೆ ಇದರ ಬಗ್ಗೆ ಸರ್ಕಾರ ಒಂದು ದೃಢ ನಿಲುವನ್ನು ತೆಗೆದುಕೊಳ್ಳಬೇಕೆಂಬ ಒಳ್ಳೆಯ ಅಭಿಪ್ರಾಯವನ್ನು ವಿರೋಧ ಪಕ್ಷದ ನಾಯಕರು ವ್ಯಕ್ತಪಡಿಸಿದ್ದಾರೆ. ಅವರು ವ್ಯಕ್ತಪಡಿಸಿರತಕ್ಕ ಅಭಿಪ್ರಾಯ ಸಾಧುವಾಗಿರತಕ್ಕದ್ದು. ನೇಕಾರರ ಬಗ್ಗೆ ಸಾಕಷ್ಟು ಕಾಳಜಿಯನ್ನು ಸದನದ ಮೂಲಕ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಸರ್ಕಾರ ಇನ್ನುಮುಂದೆ ಈ ರೀತಿ ನೇಕಾರರ ಹಿತದೃಷ್ಟಿಯಿಂದ ಆರ್ಡರ್‌ಗಳನ್ನು ನಾವು ಬದಲಾಯಿಸತಕ್ಕ ಒಂದು ವ್ಯವಸ್ಥೆಗೆ ಹೋಗಲಿಕ್ಕೆ ಇಷ್ಟಪಡುವುದಿಲ್ಲ. ಸರ್ಕಾರ ಈಗಾಗಲೇ ಒಂದು ನಿಲುವು ತೆಗೆದುಕೊಂಡಿದೆ. ಇದರ ಜೊತೆಯಲ್ಲಿ ವಿದ್ಯಾ ಇಲಾಖೆಯ ವಿದ್ಯಾ ವಿಕಾಸ ಯೋಜನೆಯ ಆರ್ಡರ್ ಜೊತೆಯಲ್ಲಿ ಬೇರೆ ಇಲಾಖೆಗಳ ಆರ್ಡರ್‌ಗಳನ್ನು ಸಹ ತೆಗೆದುಕೊಳ್ಳಲಿಕ್ಕೆ ನಮ್ಮ ಇಲಾಖೆ ಪ್ರಯತ್ನ ಮಾಡುತ್ತಿದೆ. ಅದರ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡುತ್ತಿದ್ದೇವೆ. ನೇಕಾರರ ಹಿತದೃಷ್ಟಿಯಿಂದ ಮಾಡುತ್ತಿದ್ದೇವೆ. ಈ ಆರ್ಡರ್‌ಗಳು ಇಲ್ಲದಿದ್ದರೆ ನೇಕಾರರು ಜೀವನ ಮಾಡುವುದಕ್ಕೆ ಕಷ್ಟವಾಗುತ್ತದೆ. ಪವರ್‌ಲೂಮ್ ಅಥವಾ ಹ್ಯಾಂಡ್‌ಲೂಮ್ ವೀವರ್ಸ್ ಈ ಆರ್ಡರ್‌ಗಳು ಇಲ್ಲದಿದ್ದರೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ ಅವರು ಬೀದಿ ಪಾಲಾಗುತ್ತಾರೆ. ಸರ್ಕಾರಕ್ಕೆ ನೇಕಾರರ ಬಗ್ಗೆ ಸಾಕಷ್ಟು ಕಾಳಜಿ ಇರುವುದರಿಂದ ನಾವು ಯಾವುದೇ ರೀತಿಯ ತೊಂದರೆಯಾಗದ ಹಾಗೆ ಮುಂದಿನ ವರ್ಷಗಳಲ್ಲಿ ಹೆಚ್ಚಿಗೆ ಆರ್ಡರ್‌ಗಳನ್ನು ತೆಗೆದುಕೊಂಡು ಅವರ ಜೀವನ ಮಾಡುವುದಕ್ಕೆ ಅನುಕೂಲ ಮಾಡಿಕೊಡಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಈ ರೀತಿ ವಿವಾದಗಳು ಮುಂದೆ ಆಗದಹಾಗೆ ಸರ್ಕಾರ ಎಚ್ಚರಿಕೆಯನ್ನು ವಹಿಸುತ್ತದೆಂದು ತಮ್ಮ ಮೂಲಕ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಆ) ಕೋಲಾರ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ

ಅಧ್ಯಕ್ಷರು: ಮಾನ್ಯ ಭೈರೇಗೌಡರೇ ತಮ್ಮದು ಮತ್ತು ಶ್ರೀನಿವಾಸಗೌಡ ಪ್ರಸ್ತಾವನೆ ಇಲ್ಲಿದೆ. ಶ್ರೀನಿವಾಸಗೌಡರು ಜಿಲ್ಲಾಮಂತ್ರಿಗಳ ಹತ್ತಿರ ಏನೋ ಮಾತನಾಡುತ್ತಾ ಮಗ್ನರಾಗಿದ್ದಾರೆ. ನೀತಿಯ ಬಗ್ಗೆ ಆಲೋಚನೆ ಮಾಡುತ್ತಿರಬಹುದೆಂದು ಕಾಣುತ್ತಿದೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇಲ್ಲ.

ಅಧ್ಯಕ್ಷರು: ನಾಳೆ ತೆಗೆದುಕೊಳ್ಳೋಣ. ಮೊದಲೇ ನಾನು ಹೇಳಿದ್ದೇನೆ. ಗ್ರಾಮೀಣಾಭಿವೃದ್ಧಿ ಮಸೂದೆ ವಿಧಾನ ಪರಿಷತ್‌ನಲ್ಲಿದೆ ಅದು 21ನೇ ತಾರೀಖು ಲ್ಯಾಪ್ಸ್ ಆಗುತ್ತದೆ ಇವತ್ತು ಅವರು ಅದನ್ನು ಪಾಸ್ ಮಾಡಿಸಿಕೊಳ್ಳಬೇಕಾಗಿದೆ. ಅದಕ್ಕೋಸ್ಕರ ಅವರು ಪರಿಷತ್‌ನಲ್ಲಿದ್ದಾರೆ.

ಶ್ರೀ ಸಿ. ಬೈರೇಗೌಡ: ನನ್ನ ಪ್ರಶ್ನೆ ಬಹಳ ಸಿಂಪಲ್ ಆಗಿ ಇದೆ. ಯಾರಾದರೂ ಹೌದು ಅಥವಾ ಇಲ್ಲ, ಕೊಡುತ್ತೇವೆ ಅಥವಾ ಬಿಡುತ್ತೇವೆಂದು ಹೇಳಿಬಿಟ್ಟರೆ ಸಾಕು. ತಡ ಏಕೆ

ಆಗುತ್ತಿದೆ ಅಂದರೆ, 1988-89ರಲ್ಲಿ ತೆಗೆದುಕೊಂಡಂತಹ ಯೋಜನೆಗಳು ಇನ್ನೂ ಕೂಡ ಕಾರ್ಯಗತವಾಗುತ್ತಿವೆ. ಸುಮಾರು 12 ವರ್ಷಗಳಾದರೂ ಕೂಡ ಆ ಯೋಜನೆಗಳು ಇನ್ನೂ ಸಹ ಕಾರ್ಯಗತವಾಗುತ್ತಿಲ್ಲ. ಕಾರಣ ಏನೆಂದರೆ, ಸಕಾಲಕ್ಕೆ ಹಣವನ್ನು ಬಿಡುಗಡೆ ಮಾಡದಿರತಕ್ಕದ್ದು. ನನ್ನ ಹತ್ತಿರ ಈ ರೀತಿಯಾಗಿ ಎಷ್ಟು ಹಣ ನಮ್ಮ ಜಿಲ್ಲೆಗೆ ಬಿಡುಗಡೆಯಾಗಬೇಕೆನ್ನತಕ್ಕ ಅಂಕಿಅಂಶಗಳೆಲ್ಲ ಇವೆ. ಅದನ್ನು ಕೇಳುತ್ತೇನೆ, ಅಷ್ಟು ಹಣವನ್ನು ಬಿಡುಗಡೆ ಮಾಡಲಾಗುತ್ತದೆಂದು ಹೇಳಿಬಿಟ್ಟರೆ ಸಾಕು.

ಅಧ್ಯಕ್ಷರು: ಜಿಲ್ಲಾ ಉಸ್ತುವಾರಿ ಮಂತ್ರಿಗಳಿದ್ದಾರೆ ಅವರು ಉತ್ತರ ಕೊಡುವುದಕ್ಕೆ ರೆಡಿಯಾಗಿದ್ದರೆ ಆಗಬಹುದು.

ಶ್ರೀ ಸಿ. ಬೈರೇಗೌಡ: ನಾನು ಬಹಳ ಸ್ಪೆಸಿಫಿಕ್ ಆಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ತಮಗೂ ಸಹ ಅಧ್ಯಕ್ಷರಿಗೆ ಗೊತ್ತಿದೆ ಅನೇಕ ಹಳ್ಳಿಗಳಲ್ಲಿ ಇವತ್ತು ಕೊಳವೆಬಾವಿ ಕೊರೆದು ನೀರು ಬಂದರೆ ಅದಕ್ಕೆ ಪಂಪ್ ಅಳವಡಿಸುವಷ್ಟರಲ್ಲಿ ಒಂದು ವಾರದೊಳಗೆ ಆ ಕೊಳವೆಬಾವಿಯಲ್ಲಿ ಒಂದು ತೊಟ್ಟು ನೀರು ಇರುವುದಿಲ್ಲ.

ಅಧ್ಯಕ್ಷರು: ಹೌದು.

ಶ್ರೀ ಸಿ. ಬೈರೇಗೌಡ: ಅಂತಹ ಪರಿಸ್ಥಿತಿ ಉಂಟಾಗಿದೆ. ನೀರಿನ ಮಟ್ಟ ಕೆಳಗೆ ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. 12 ವರ್ಷಗಳ ಕಾಲ ಒಂದು ಯೋಜನೆಯನ್ನು ನಾವು ಕಾರ್ಯಗತ ಮಾಡದಿದ್ದರೆ ಜನಗಳಿಗೆ ಕುಡಿಯುವ ನೀರಿನ ತೊಂದರೆ ಎಷ್ಟು ಆಗುತ್ತದೆ ಎನ್ನುವುದನ್ನು ತಾವೇ ಊಹಿಸಿಕೊಳ್ಳಬೇಕು. ತಾವು ಅವಕಾಶ ಕೊಟ್ಟರೆ ಅದಕ್ಕೆ ಹಣ ಎಷ್ಟು ಬೇಕಾಗುತ್ತದೆನ್ನುವುದನ್ನು ನಾನು ಲೆಕ್ಕ ಹೇಳುತ್ತೇನೆ.

ಅಧ್ಯಕ್ಷರು: ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಉತ್ತರ ಹೇಳಬೇಕು. ಅವರು ಈಗ ಇಲ್ಲ, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಉತ್ತರ ಹೇಳಿದರೆ ಸಾಕು. ಇದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ: ಆಗಬಹುದು ಸ್ವಾಮಿ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿಗಳ ಜೊತೆಗೆ ನಮ್ಮ ನಗರಾಭಿವೃದ್ಧಿ ಸಚಿವರು ಇರುವುದರಿಂದ ನಾನು ನಗರಾಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು: ಎಲ್ಲವನ್ನೂ ಒಟ್ಟಿಗೆ ತೆಗೆದುಕೊಳ್ಳೋಣ.

ಶ್ರೀ ಕೆ. ಶ್ರೀನಿವಾಸಗೌಡ: ನಾಳೆ ನಾನು ಇರುವುದಿಲ್ಲ. ಅಲ್ಲಿ ಏನಾಗಿದೆ ಅಂದರೆ....

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿಗೆ ಸಂಬಂಧಪಟ್ಟ ಹಾಗೆ ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯ ಮಂತ್ರಿಗಳು ಬರುತ್ತಾರೆ. ನಮ್ಮಲ್ಲಿ ಕಾರ್ಯಕ್ರಮಗಳು ಎದ್ದು ಕಾಣುತ್ತಿವೆ. ಕೋಲಾರ ಜಿಲ್ಲಾ ಕೇಂದ್ರ ಸುಮಾರು ಒಂದೂವರೆ ಲಕ್ಷ ಜನಸಂಖ್ಯೆ ಇರತಕ್ಕ ಪಟ್ಟಣ. ಅದು ಜಿಲ್ಲಾ ಕೇಂದ್ರ ಸುಮಾರು 670 ಕೋಟಿ ರೂಪಾಯಿ

ಕುಡಿಯುವ ನೀರಿನ ಯೋಜನೆ ಸಿದ್ಧವಾಗಿದೆ. ಅದಕ್ಕೆ ಮಂಜೂರಾತಿಯನ್ನು ಕೊಡುತ್ತಿಲ್ಲ. ಅದು ಅಲ್ಲದೆ 150 ಹಳ್ಳಿಗಳು ಸೇರಿದಂತೆ 7-8 ಪಟ್ಟಣಗಳಿಗೂ ಕೂಡ ಕಾವೇರಿಯಿಂದ ನೀರನ್ನು ಕೊಡಬೇಕೆನ್ನುವ ಕುಡಿಯುವ ನೀರಿನ ಯೋಜನೆ ತಯಾರಾಗಿದೆ. ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳನ್ನು ಖುದ್ದಾಗಿ ಕಂಡು ಹೇಳಿದ್ದೇವೆ. ಇದನ್ನು ಮಂಜೂರಾತಿ ಮಾಡುವುದಕ್ಕೆ ಅವಕಾಶ ಕೊಡಿ, ಇದನ್ನು ಹುಡ್ಕೋಗೆ ಕಳುಹಿಸಿ ಹಣವನ್ನು ಕೊಡುವುದಕ್ಕೆ ವ್ಯವಸ್ಥೆಯಾಗುತ್ತದೆಂದು ಹೇಳಿದ್ದೇನೆ.

ಅಧ್ಯಕ್ಷರು: ಕೋಲಾರ ನಗರ ಅನ್ನುವುದು ನನಗೆ ಗೊತ್ತಿದೆ. ಅವರು ಉತ್ತರ ಕೊಡಲಿಕ್ಕೆ ರೆಡಿಯಾಗಿದ್ದರೆ ಉತ್ತರ ಕೊಡಲಿ ಅದಕ್ಕೆ ನನ್ನ ಅಭ್ಯಂತರವಿಲ್ಲ.

ಶ್ರೀ ಜಗದೀಶಶೆಟ್ಟರ್: ಮಾನ್ಯ ಸದಸ್ಯರು ಇರುವುದಿಲ್ಲವೆಂದು ಇವತ್ತು ಮಂತ್ರಿಗಳು ಉತ್ತರ ಕೊಡುವುದಾದರೆ ನಾವು ನಗರ ಪ್ರದೇಶಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ.

+ಶ್ರೀ ಕೆ. ಶ್ರೀನಿವಾಸಗೌಡ: ಇದು ಕೋಲಾರ ನಗರಕ್ಕೆ ಮಾತ್ರ ಸೀಮಿತವಾಗಿರತಕ್ಕದ್ದು ವಿರೋಧ ಪಕ್ಷದ ನಾಯಕರು ದಯವಿಟ್ಟು ಅಡ್ಡ ಬರಬೇಡಿ.

ಅಧ್ಯಕ್ಷರು: ಕೋಲಾರ ನಗರದ ನೀರು ಸರಬರಾಜು ಬಗ್ಗೆ ಉತ್ತರ ಕೊಡುವುದಕ್ಕೆ ತಾವು ತಯಾರಿದ್ದೀರಾ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ನಾಳೆಗೆ ಉತ್ತರ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಗಮನ ಸೆಳೆಯುವ ಸೂಚನೆಯಲ್ಲಿ ಇವತ್ತು ಅಜೆಂಡಾದಲ್ಲಿ ಬಂದಿದೆ ಎನ್ನುವುದು ತಮಗೆ ಗೊತ್ತಿದೆ. ಗಮನ ಸೆಳೆದ ಮೇಲೆ ತಮ್ಮ ಉತ್ತರ ರೆಡಿಯಾಗಿದೆಯಾ?

ಶ್ರೀ ಕೆ. ಶ್ರೀನಿವಾಸ ಗೌಡ: ಇವತ್ತು ಇಲ್ಲದಿದ್ದರೆ ನಾಳೆ ಉತ್ತರ ಕೊಡಿ.

ಅಧ್ಯಕ್ಷರು: ಇವತ್ತು ಪ್ರಸ್ತಾಪ ಮಾಡುತ್ತಾರೆ, ನಾಳೆ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಸಿ. ಬೈರೇಗೌಡ: ಹೌದು ಅಥವಾ ಇಲ್ಲ. ಆಗುತ್ತದೆ ಅಥವಾ ಆಗುವುದಿಲ್ಲ ಇಷ್ಟೆ ನಮಗೆ ಉತ್ತರ ಬೇಕಾಗಿರತಕ್ಕದ್ದು. ಎಲ್ಲಾ ಅಂಕಿಅಂಶಗಳು ಕಡತಗಳು ಸರ್ಕಾರದ ವಶದಲ್ಲಿದೆ. ಮಂಜೂರಾತಿಯನ್ನು ಕೊಡುತ್ತೇವೆ, ಹಣವನ್ನು ಅಷ್ಟು ಬಿಡುಗಡೆ ಮಾಡುತ್ತೇವೆ ಎಂದು ಹೇಳಿಬಿಟ್ಟರೆ ಅರ್ಧ ನಿಮಿಷದ ಕೆಲಸ ಇದು.

ಅಧ್ಯಕ್ಷರು: ನಾಳೆ ತಾವು ಇರುತ್ತೀರಲ್ಲ ಶ್ರೀನಿವಾಸಗೌಡರ ಪರವಾಗಿ ಪ್ರಶ್ನೆ ಕೇಳಿ. ಶ್ರೀನಿವಾಸಗೌಡರೆ ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಿಗೆ ಗೊತ್ತಿದೆ, ಕೋಲಾರ ನಗರದಲ್ಲಿ ಸುಮಾರು ಒಂದೂವರೆ ಲಕ್ಷ ಜನಸಂಖ್ಯೆಯಿಂದೆ. ಕುಡಿಯುವ ನೀರು ಒದಗಿಸತಕ್ಕ ಎರಡು ಕೆರೆಗಳು ಇದ್ದವು. ಒಂದು ಅಮ್ಮೇರಹಳ್ಳಿ ಕೆರೆ ಇನ್ನೊಂದು ಮಡೇರಹಳ್ಳಿ ಕೆರೆ. ಇವತ್ತು ಆ ಎರಡೂ ಕೆರೆಗಳು ಬತ್ತಿ ಹೋಗಿವೆ. ಒಂದು ತೊಟ್ಟು ನೀರಿಲ್ಲ. ಗುಬ್ಬಚ್ಚಿ

ಕುಡಿಯುವುದಕ್ಕೂ ಸಹ ನೀರಿಲ್ಲ. ನಾವು ನೂರು ಕೊಳವೆಬಾವಿಗಳನ್ನು ಕೊರೆಸಿ ಮುರ್ನಾಲ್ಕು ವರ್ಷಗಳಿಂದ ನೀರು ಕೊಡುವಂತಹ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಎಲೆಕ್ಟ್ರೀಸಿಟಿ ಪಂಪ್‌ಗಳ ಮೂಲಕ ನೀರು ಕೊಡುತ್ತಿದ್ದೇವೆ. ಇವತ್ತು 3-4 ದಿವಸಗಳಿಗೊಮ್ಮೆ ಕುಡಿಯುವ ನೀರು ಬರುತ್ತಿದೆ. ಹಳ್ಳಿಗಳಲ್ಲಿ ಆದರೆ ಒಂದು ಬೋರ್‌ವೆಲ್ ಕೆಟ್ಟರೆ ಪಕ್ಕದ ಬೋರ್‌ವೆಲ್ ಅಥವ ತೋಟಗಳಲ್ಲಿ ನೀರು ತೆಗೆದುಕೊಂಡು ಬರುವಂತಹ ಪರಿಸ್ಥಿತಿ ಇದೆ. ಪಟ್ಟಣದಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಇವತ್ತು ಉಲ್ಬಣಗೊಂಡಿದೆ. ನಾನು ಸತತವಾಗಿ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾನ್ಯ ಮಂತ್ರಿಗಳ ಹತ್ತಿರ ಹೇಳುತ್ತಾ ಬಂದಿದ್ದೇನೆ. ಇವತ್ತು ಕೋಲಾರದಲ್ಲಿ ಕುಡಿಯುವ ನೀರಿಗೆ ಹಾಹಾಕಾರವಾಗಿದೆ. ಹೋದಾವಾರ ಸುಮಾರು ಎರಡು ಸಾವಿರ ಜನ ಸೇರಿ ನಗರಸಭೆಗೆ ಮುತ್ತಿಗೆ ಹಾಕುವುದಕ್ಕೆ ಬಂದಿದ್ದರು. ಆಗ ಸಂಬಂಧಪಟ್ಟ ನಗರಸಭೆಯ ಕಮಿಷನರ್ ಹೋಗಿ ಅವರಿಗೆ ಸಮಾಧಾನ ಹೇಳಿ ಟ್ಯಾಂಕರ್‌ಗಳ ಮೂಲಕ ನೀರನ್ನು ಒದಗಿಸತಕ್ಕ ವ್ಯವಸ್ಥೆಯಾಗಿತ್ತು. ಇವತ್ತು ಕುಡಿಯುವ ನೀರಿಗೆ ಇಂತಹ ಪರಿಸ್ಥಿತಿ ಬಂದಿರುವುದರಿಂದ ಕೆರೆಗಳಲ್ಲಿ ಕನಿಷ್ಟ ಆರು ಅಡಿ ಹೂಳನ್ನು ಎತ್ತೋಣ 1 ಕೋಟಿ ರೂಪಾಯಿ ಹಣ ಕೊಡಿ ಎರಡೂ ಕೆರೆಗಳೂ ಅಂದರೆ ಇದರ ಬಗ್ಗೆ ಗಮನಹರಿಸುತ್ತಿಲ್ಲ. ಮಾನ್ಯ ಬೈರೇಗೌಡರು ಹೇಳಿದಹಾಗೆ ಒಂದು ಪ್ರಸ್ತಾವನೆ ಇದೆ. ಕಾವೇರಿ ನದಿಯಿಂದ ನೀರನ್ನು ತರಲಿಕ್ಕೆ 670 ಕೋಟಿ ರೂಪಾಯಿ ಹಣವನ್ನು ಒದಗಿಸಿದರೆ, ವರ್ಲ್ಡ್ ಬ್ಯಾಂಕ್ ಅಥವಾ ಹುಡ್ಕೋ ಎಲ್ಲಿಯೋ ಹಣವನ್ನು ತೆಗೆದುಕೊಂಡು ಕೊಟ್ಟರೆ ಆರು ಪಟ್ಟಣಗಳಿಗೆ 131 ಹಳ್ಳಿಗಳಿಗೆ ನೀರು ಆಗುತ್ತದೆ. ಈ ಸಮಸ್ಯೆ ಬಗ್ಗೆ ಸರ್ಕಾರ ಬಹಳವಾಗಿ ಗಮನಹರಿಸಿ ನೋಡುತ್ತಿಲ್ಲ. ಇವತ್ತು ಕೊನೆಯ ಪಕ್ಷ ಮಳೆ ಬರುವುದಕ್ಕೆ ಮೊದಲೇ ಈ ಕೆರೆಗಳ ಹೂಳನ್ನು ಎತ್ತಬೇಕು. ಏಕೆಂದರೆ ಇಲ್ಲಿ ಒಂದು ಸಾರಿ ನೀರು ತುಂಬಿದರೆ ಎರಡು ವರ್ಷ ನೀರು ಇರುತ್ತದೆ. ಇದರ ಬಗ್ಗೆ ಮಾನ್ಯ ಅಧ್ಯಕ್ಷರಿಗೆ ಗೊತ್ತಿದೆ. ನೀವು ನಮ್ಮ ಜಿಲ್ಲೆಯವರೇ ಆಗಿರುವುದರಿಂದ ಇಲ್ಲಿಯ ನೀರು ಕುಡಿದಿದ್ದೀರಿ. ಬಿಸ್ಲೇರಿ-ಗಿಸ್ಲೇರಿ ಅಂದರೆ ನನಗೆ ಗೊತ್ತಿಲ್ಲ. ಆದರೆ ಅಲ್ಲಿ ಕೋಲಾರದಲ್ಲಿ ನೀರು ಕುಡಿದಾಗ ಅದರ ಬಣ್ಣವನ್ನು ನೀವು ನೋಡಿದ್ದೀರಿ. ಮಾನ್ಯ ಜಿಲ್ಲಾಮಂತ್ರಿಗಳಿಗೂ ಕೂಡ ಅದರ ಅನುಭವ ಇದೆ. ಇಲ್ಲಿಂದ ಆಚೆ ನೀವು ಕೋಲಾರಕ್ಕೆ ಬಂದರೆ, ಅಲ್ಲಿ ಬಂದು ಬಿಸ್ಲೇರಿ ನೀರು ಕುಡಿದರೆ ನಾನಂತೂ ಸ್ಟೈಕ್ ಮಾಡಿ ಕುಳಿತುಕೊಳ್ಳುತ್ತೇನೆ. ಏಕೆಂದರೆ ನಾವು ಏನು ನೀರನ್ನು ಕುಡಿಯುತ್ತೇವೆ, ನೀವೂ ಕೂಡ ಅದೇ ನೀರನ್ನು ಕುಡಿಯಿರಿ. ಆವಾಗ ನಿಮಗೆ ಇಲ್ಲಿಯ ಕಷ್ಟ, ಜನರ ಪರಿಸ್ಥಿತಿ ಗೊತ್ತಾಗುತ್ತದೆ.

ಶ್ರೀ ಎ. ಮುನಿಯಪ್ಪ: ನಾನು ಬಂದರೆ ಸ್ಪೆಶಲ್ ಆಗಿ ಬೇರೆ ನೀರನ್ನು ಏನೂ ತಂದಿರುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ: ನೀವು ಬಿಸ್ಲೇರಿ ನೀರನ್ನು ಕುಡಿಯುತ್ತಿದ್ದುದನ್ನು ನಾನು ನೋಡಿದ್ದೇನೆ. ಅದಕ್ಕೋಸ್ಕರ ನಿಮಗೆ ನಾನು ಹೇಳಿದ್ದು. ಇಲ್ಲದಿದ್ದರೆ ನಾನು ಏಕೆ ಹೇಳಲಿ? ಅದೇ ನೀರನ್ನು ನೀವು ಕುಡಿದಿದ್ದರೆ ನಾನು ನಿಮ್ಮ ಬಗ್ಗೆ ಪ್ರಸ್ತಾಪವನ್ನೇ ಮಾಡುತ್ತಿರಲಿಲ್ಲ. ನೀವು ಮಂತ್ರಿಗಳು ಬೆಂಗಳೂರಿನಿಂದ ಬರುವಾಗ 15 ರೂಪಾಯಿ 20 ರೂಪಾಯಿ ಕೊಟ್ಟು ಬಿಸ್ಲೇರಿ ನೀರು ತಂದು ಕುಡಿಯುತ್ತೀರಿ. ಅಲ್ಲಿ ನಾವೇನು ನೀರು ಕುಡಿಯುತ್ತೇವೆ, ಆ ನೀರನ್ನು ನೀವು ಕುಡಿದಿದ್ದರೆ ಆವತ್ತು ಆ ಜನರಿಗೆ ಎಷ್ಟು ಕಷ್ಟ ಇದೆಯೆಂದು ನೀವೇ ಹೇಳುತ್ತಿದ್ದೀರಿ. ಆದರೆ ಆ

ಭಾವನೆ ನಿಮ್ಮಲ್ಲಿ ಇಲ್ಲ. ಆದ್ದರಿಂದ ಇವತ್ತು ಈ ಎರಡು ಕೆರೆಗಳಿಗೆ ಒಂದು ಕೋಟಿ ರೂಪಾಯಿ ಹೂಳು ಎತ್ತುವುದಕ್ಕೆ ಕೊಡಬೇಕು. ಅದು ಇವತ್ತು ನಾಳೆ ಎಂದರೆ ಆಗುವುದಿಲ್ಲ. ಸುಮಾರು ಎರಡು-ಮೂರು ಹದ ಮಳೆಬಂದರೆ ಸ್ವಲ್ಪ ನೀರು ಬಂದುಬಿಡುತ್ತದೆ. ನೀರು ಬಂದಮೇಲೆ ಎತ್ತುವುದಕ್ಕೆ ಆಗುವುದಿಲ್ಲ. ಇವತ್ತು ಆರೂವರೆ ಅಡಿ ಹೂಳು ಎತ್ತುವ ಕಾರ್ಯಕ್ರಮವನ್ನು ನಗರಭೆಯಿಂದ ಸ್ವಲ್ಪ ಹಣವನ್ನು ಕ್ರೋಢೀಕರಿಸಿಕೊಂಡು ಮೊನ್ನೆಯದಿವಸ ಶುರುಮಾಡಿದ್ದೇವೆ. ಅದಕ್ಕೆ ನೀವು ಒತ್ತುಕೊಟ್ಟು ಇವತ್ತು ಎರಡು ಕೆರೆಗಳಿಗೆ, ನೀವು ಕಾಳಿ ನದಿಯಿಂದ ಯಾವ ಹುಡ್ಕೋಗೆ ಗ್ಯಾರಂಟಿ ಕೊಡುತ್ತೀರೋ ಗೊತ್ತಿಲ್ಲ. ಅದು ನಿಧಾನಗೊಳ್ಳುವಂಥ ಸಂದರ್ಭ ಇರುವುದುರಿಂದ ನೀವು ಒಂದು ಕೋಟಿ ರೂಪಾಯಿಯನ್ನು ಕೂಡಲೇ ಮಂಜೂರಾತಿ ಮಾಡಬೇಕು. ಈ ಹೂಳು ಎತ್ತುವುದಕ್ಕೆ ಒಂದು ಕೋಟಿ ರೂಪಾಯಿ ಕೊಡುವ ಬಗ್ಗೆ ನಾಳೆ ಇವತ್ತು ಎಂದು ಮಿಾನವೇಶ ಎಣಿಸದೆ ಇವತ್ತೇ ಸರ್ಕಾರದಿಂದ ಮಂಡೂರು ಮಾಡಬೇಕು. ಒಂದು ಇಂತಹ ದೊಡ್ಡ ಪಟ್ಟಣದಲ್ಲಿ ಇಂತಹ ಪರಿಸ್ಥಿತಿ ಇದ್ದರೆ, ಒಂದು ಕಡೆ ಬೆಂಗಳೂರನ್ನು ಸಿಂಗಾಪುರ ಮಾಡುವುದಕ್ಕೆ ಹೋಗುತ್ತಿದ್ದೀರಿ. ಕನಿಷ್ಟಪಕ್ಷ ಕೋಲಾರವನ್ನು ಬೆಂಗಳೂರು ಆದರೂ ಮಾಡಿ. ನಾನು ಅದನ್ನೇ ಹೇಳುತ್ತಿರುವುದು. ನೀವು ಬೆಂಗಳೂರನ್ನು ಸಿಂಗಾಪುರ ಮಾಡುವುದು ಸಂತೋಷದ ವಿಷಯ. ಏಕೆಂದರೆ ಇದು ನಮ್ಮ ರಾಜ್ಯದ ರಾಜಧಾನಿ. ಇದರ ಅಭಿವೃದ್ಧಿಯಾದರೆ ನಮಗೂ ಸಂತೋಷವಾಗುತ್ತದೆ. ಮಾನ್ಯ ಅಧ್ಯಕ್ಷರದ್ದೂ ಬೆಂಬಲ, ನಮ್ಮ ಬೇಡಿಕೆ ಬಗ್ಗೆ ಇದೆ.

ಅಧ್ಯಕ್ಷರು: ನಾನು ಹೋಗಿಬರುವ ದಾರಿಯಲ್ಲಿ ನಿಮ್ಮ ನೀರು ಕುಡಿಯಬೇಕಲ್ಲ?

ಶ್ರೀ ಕೆ. ಶ್ರೀನಿವಾಸಗೌಡ: ಇದು ಬಹಳ ವಿಷಮ ಪರಿಸ್ಥಿತಿ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಇವತ್ತು ಕೋಲಾರದ ಜನರು ಬಹಳ ಸಂಕಷ್ಟದಲ್ಲಿದ್ದಾರೆ. ಇದರ ಜೊತೆಗೆ 60 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ಮೋಟಾರು ಹಾಕಿ ನೀರು ಕೊಡುವಂತಹ ಕೆಲಸಕ್ಕೆ ಒಂದು ಪ್ರಸ್ತಾವನೆಯನ್ನು ನಗರಸಭೆಯಿಂದ ನಿಮ್ಮ ಇಲಾಖೆಗೆ ಕಳಿಸಿದ್ದಾರೆ. ಆದರೆ ಇದರ ಬಗ್ಗೆ ಕೂಡ ಯಾವುದೇ ತೀರ್ಮಾನವನ್ನು ಇದುವರೆಗೂ ತೆಗೆದುಕೊಂಡಿಲ್ಲ. ಇಂತಹ ವಿಷಮ ಪರಿಸ್ಥಿತಿಯಲ್ಲಿ ನೀವು ತೀರ್ಮಾನ ತೆಗೆದುಕೊಳ್ಳದಿದ್ದರೆ ಇನ್ನು ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಿ? ನಾಳೆ ಮಳೆ ಬಂದರೆ ಸ್ವಲ್ಪ ಮರೆಯುತ್ತಾರೆ. ಇವತ್ತು ಒಂದು ಅವಕಾಶ ಇದೆ. ಎರಡೂ ಕೆರೆಗಳಲ್ಲಿ ನೀರು ಇಲ್ಲದೇ ಇರುವುದರಿಂದ ಈಗ ಹೂಳೆತ್ತಿದರೆ ಒಂದು ಸಾರಿ ನೀರು ತುಂಬಿದರೆ ಎರಡು ವರ್ಷ ನೀರು ಇರುತ್ತದೆ.

ಅಧ್ಯಕ್ಷರು: ಶ್ರೀನಿವಾಸಗೌಡರೇ, ಹೂಳು ಎತ್ತುವುದಲ್ಲ. ಕೂಡಲೇ ನಾಡಿದ್ದೇ ಇದನ್ನು ಪ್ರಾರಂಭ ಮಾಡಬೇಕು.

ಶ್ರೀ ಕೆ. ಶ್ರೀನಿವಾಸಗೌಡ: ಈಗ ಯಾವುದೋ ದುಡ್ಡು ಹಾಕಿಸಿ ಶುರು ಮಾಡಿದ್ದೇವೆ. ಅದಕ್ಕೆ ಸರ್ಕಾರ ಮುಂದೆ ಬರಲಿ. ಅದನ್ನೇ ನಾನು ಹೇಳುತ್ತಿರುವುದು.

ಅಧ್ಯಕ್ಷರು: ಕೋಲಾರ ಜಿಲ್ಲೆಯಲ್ಲಿ ಈಗ ಹಿಂಗಾರು ಮಳೆ ಪ್ರಾರಂಭವಾಗಿದೆ. ಒಂದು ಸಲ ಮಳೆ ಪ್ರಾರಂಭವಾಯಿತು ಎಂದರೆ ಕೆರೆಗಳು ತುಂಬಿಹೋಗುತ್ತವೆ. ನಿಮ್ಮ ಅಡ್ಮಿನಿಸ್ಟ್ರೇಟೀವ್ ಪ್ರೊಸೀಜರ್‌ನಲ್ಲಿ ಇದೆಲ್ಲ ಮಾಡುವುದರೊಳಗೆ ಹಿಂಗಾರು ಮಳೆ ಶುರುವಾಗುತ್ತದೆ.

ಕೆರೆಗಳೆಲ್ಲ ತುಂಬಿಹೋಗುತ್ತವೆ. ಆದ್ದರಿಂದ, ಹೂಳು ಎತ್ತಿಸುವ ಕೆಲಸವನ್ನು ಬೇಗ ಮಾಡಿದರೆ ಒಳ್ಳೆಯದು. ಅದರಲ್ಲೂ ಕುಡಿಯುವ ನೀರಿನ ಬಗ್ಗೆ ಅಗತ್ಯವಾಗಿರುವ ಈ ಕೆಲಸವನ್ನು ಬೇಗನೆ ಮಾಡಿಸಿ.

ಶ್ರೀ ಕೆ. ಶ್ರೀನಿವಾಸಗೌಡ: ಇವತ್ತು ಅದಕ್ಕೆ ಹಣವನ್ನು ಯಾವ ಹೆಡ್‌ನಲ್ಲಿ ತರುತ್ತೀರೋ ನನಗೆ ಗೊತ್ತಿಲ್ಲ. ಇವತ್ತು ನೀವು ಮಾಡದೇ ಇದ್ದರೆ ನಾವಂತೂ ಕೋಲಾರದಲ್ಲಿ ದೊಡ್ಡ ಪ್ರತಿಭಟನೆಯನ್ನು ಮಾಡುತ್ತೇವೆ. ಜಿಲ್ಲಾ ಮಂತ್ರಿಗಳು ಕೋಲಾರಕ್ಕೆ ಬರದೇ ಇರುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಏಕೆಂದರೆ ಜನರಿಗೆ ಕುಡಿಯುವ ನೀರು ಇಲ್ಲದೇ ಇದ್ದರೆ ಇನ್ನು ಏನು ಮಾಡುವುದಕ್ಕೆ ಆಗುತ್ತದೆ? ಇದರ ಬಗ್ಗೆ ನೀವು ಗಮನಹರಿಸಬೇಕು. ಮಾನ್ಯ ಅಧ್ಯಕ್ಷರೇ, ಇವತ್ತು ಇವರು ಒಂದು ಕೋಟಿರೂಪಾಯಿಯನ್ನು ನಾವು ಕೊಡುತ್ತೇವೆ ಎಂದು ಹೇಳಬೇಕು; ಏಕೆಂದರೆ ಇದು ವಾರ್‌ಫೂಟಿಂಗ್‌ನಲ್ಲಿ ಕೆಲಸ ಮಾಡಬೇಕಾಗುತ್ತದೆ. ಅದು ಒಂದು ಜೆ.ಸಿ.ಬಿ.ಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ನಾಲ್ಕೈದು ಜೆ.ಸಿ.ಬಿ. ಕೊಟ್ಟು, ಐವತ್ತು ಟ್ರಾಕ್ಟರ್‌ಗಳನ್ನು ಕೊಟ್ಟು ಮಣ್ಣನ್ನು ಆಚೆಗೆ ಹೊಡೆದು ಆರೂವರೆ ಅಡಿ ಆಳ ಮಾಡಿದರೆ ಅಲ್ಲಿ ಎರಡು ವರ್ಷಕ್ಕೆ ಸಾಕಾಗುವಷ್ಟು ನೀರು ಇರುತ್ತದೆ. ಇದರಿಂದ ಕೂಡ ಶಾಶ್ವತವಾದಂಥ ಕೀರ್ತಿ ಬರುತ್ತದೆ. ಇಲ್ಲದಿದ್ದರೆ ಇದು ಪ್ರತಿವರ್ಷವೂ ಇರುವ ಪರಿಸ್ಥಿತಿಯಾಗುತ್ತದೆ. ತಮಗೆ ಗೊತ್ತಿರುವಂತೆ ಕೋಲಾರದಲ್ಲಿ ಮಳೆ ಸರಿಯಾಗಿ ಬೀಳುವುದಿಲ್ಲ. ಆರು ವರ್ಷಕ್ಕೆ - ಏಳು ವರ್ಷಕ್ಕೆ ಕೆರೆಗಳು ತುಂಬುತ್ತವೆ. ಕೆರೆಗಳು ತುಂಬಿದ ವರ್ಷ ಜನರು ನೀರು ಕುಡಿಯುತ್ತಾರೆ. ಉಳಿದಹಾಗೆ ನಾವು ಬೋರ್‌ವೆಲ್‌ಗೆ ಮೊರೆಹೋಗುತ್ತೇವೆ. 20ವರ್ಷಗಳ ಹಿಂದೆ 18 ಅಡಿಗೆ ನೀರು ಸಿಗುತ್ತಿತ್ತು. ಆದರೆ ಇವತ್ತು 680 ಅಡಿ ಹೋದರೂ ಕೂಡ ಒಂದು ಕಡೆ ಸಾವಿರ ಗ್ಯಾಲನ್ ಕೂಡ ನೀರು ಸಿಕ್ಕಿಲ್ಲ. ಬೋರ್‌ವೆಲ್‌ಗಳಲ್ಲಿ ಈ ಪರಿಸ್ಥಿತಿ ಆಗಿರಬೇಕಾದರೆ, ಈ ಕೆರೆಗಳಲ್ಲಿ ಹೂಳು ಎತ್ತದೇ ಹೋದರೆ ಕೋಲಾರ ನಗರಕ್ಕೆ ತುಂಬ ಕಷ್ಟವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಇವತ್ತು ವಾರ್‌ಫೂಟ್‌ನಲ್ಲಿ ನೀವು ತೀರ್ಮಾನ ತೆಗೆದುಕೊಳ್ಳಬೇಕು. ಉತ್ತರವನ್ನು ನಾಳೆ ಕೊಡಿ. ಆದರೆ ಹಣ ಒದಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಈಗ ಹೇಳಬೇಕು.

ಅಧ್ಯಕ್ಷರು: ನಾಳೆ ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ: ಹೂಳು ಎತ್ತುವುದಕ್ಕೆ ವಿಶೇಷ ಗಮನ ಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಪ್ರಾರ್ಥಿಸಿ ಮತ್ತೆ ನಾಳೆ ಫೈನಾನ್ಸ್‌ನವರನ್ನು ಕೇಳುತ್ತೇವೆ, ಇನ್ನಿತರರನ್ನು ಕೇಳುತ್ತೇವೆ ಎಂದು ಹೋಗಕೂಡದು. ಈಗಲೇ ಹೇಳಬೇಕು. ಇಲ್ಲದಿದ್ದರೆ ನಾನು ತಮ್ಮೆದುರಿಗೆ ಬಂದು ಒಂಟಿಕಾಲಲ್ಲಿ ನಿಂತು ಕೊಳ್ಳುತ್ತೇನೆ. ನನ್ನ ಪರಿಸ್ಥಿತಿ ಹಾಗೆ ಇದೆ. ನಾನು ಅಲ್ಲಿ ಓಡಾಡಬೇಕಾದರೆ ಪ್ರತಿಯೊಬ್ಬರೂ ಕೇಳುತ್ತಾರೆ. 'ನಿಮ್ಮ ಮನೆಯಲ್ಲಿ ನೀರು 'ಇದೆ' ಎಂದು. ನಮ್ಮ ಮನೆಯಲ್ಲಿ ಒಂದು ಬೋರ್‌ವೆಲ್ ಇದೆ. ನಾನು ಕಡೆಯಲ್ಲಿ ಒಂದು ಸಿಸ್ಪರ್ನ್‌ಹಾಕಿ 24 ಗಂಟೆಯೂ ನೀರು ಕೊಡುತ್ತಿದ್ದೇನೆ. ಅದರಲ್ಲೂ ನೀರು ಕಡಿಮೆ ಇದೆ. ಈ ಪರಿಸ್ಥಿತಿ ಕೋಲಾರ ಜಿಲ್ಲೆಯಲ್ಲಿ, ಇರುವಾಗ, ಇದರ ಬಗ್ಗೆ ಎರಡು- ಮೂರು ಸಲ ಸರ್ಕಾರದ ಗಮನಕ್ಕೆ ತಂದಿದ್ದೇನೆ.

ಅಧ್ಯಕ್ಷರು: ಗೌಡ್ರೇ, 24 ಗಂಟೆ ನೀರು ಕೊಡುತ್ತೇವೆ ಎಂದು ಹೇಳಿದಿರಲ್ಲ, ನಿಮ್ಮಲ್ಲಿ 24 ಗಂಟೆ ಪವರ್ ಇರುತ್ತದೆ ಎಂದು ಅರ್ಥವಾಯಿತಲ್ಲ?

ಶ್ರೀ ಕೆ. ಶ್ರೀನಿವಾಸಗೌಡ: ನನ್ನ ಮನೆ ಸ್ಟೇಶನ್ ಪಕ್ಕದಲ್ಲಿರುವುದರಿಂದ ಪವರ್‌ಗೆ ತೊಂದರೆ ಇಲ್ಲ. ಹಾಗಾಗಿ ಒಂದು ಕೋಟಿ ರೂಪಾಯಿಗಳನ್ನು ಇವತ್ತು ಹೂಳು ಎತ್ತುವುದಕ್ಕೆ ಬಿಡುಗಡೆ ಮಾಡಬೇಕು. ಕೆಲಸ ಪ್ರಾರಂಭಿಸಿ ನಿಮ್ಮನ್ನು ಕರೆದುಕೊಂಡು ಹೋಗಿ ಪೂಜೆ ಮಾಡಿಸಿ ಇವತ್ತು ಸಾಯಂಕಾಲ ನಾನು ಡೆಲ್ಲಿಗೆ ಹೋಗಬೇಕೆಂದು ಇದ್ದೆ. ಆದರೆ ಈಗ ನೀವು ಹೇಳಿದ್ದೀರಿ ಡೆಲ್ಲಿಗೆ ಹೋಗುವುದು ಬೇಡವೆಂದು. ಮೊದಲು ಅಲ್ಲಿ ಬಂದು ಪೂಜೆ ಮಾಡೋಣ ಮತ್ತು ಜನರಿಗೆ ನೀರು ಕೊಡೋಣ. ಈ ಕೆಲಸವನ್ನು ನಾವು ಮಾಡೋಣ ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿ ಅದಕ್ಕೆ ಸರ್ಕಾರ ತೀವ್ರವಾಗಿ ಗಮನಹರಿಸಿ ಹೂಳು ಎತ್ತುವುದಕ್ಕೆ ಒಂದು ಕೋಟಿ ರೂಪಾಯಿ ಹಣ ಒದಗಿಸಬೇಕೆಂದು ಹೇಳಿ ಈ ನನ್ನ ಸೂಚನೆಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೇಳುತ್ತಿದ್ದೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೇ, ಒಂದೇ ಒಂದು ವಿಷಯ ಏನೆಂದರೆ....

ಅಧ್ಯಕ್ಷರು: ಇದು ಬೆಂಗಳೂರು ನಗರದ ಬಗ್ಗೆ ಅಲ್ಲ, ಕೋಲಾರ ನಗರದ ಬಗ್ಗೆ ಇರುವುದು ನಾಳೆ ನೀವು ಮಾತನಾಡಿ.

ಶ್ರೀ ಸಿ. ಬೈರೇಗೌಡ: ಅಧ್ಯಕ್ಷರೇ, ತಮಗೆ ಕೋಲಾರ ನಗರದ ಪರವಾಗಿ ಧನ್ಯವಾದಗಳು. ಏಕೆಂದರೆ ನಮ್ಮ ಧ್ವನಿಗೆ ತಾವು ಕೂಡ ಧ್ವನಿಯನ್ನು ಕೂಡಿಸಿದ್ದೀರಿ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ. ತುರ್ತಾಗಿ ಇದು ಆಗಬೇಕು. ಈಗ ಹೂಳು ಎತ್ತುವುದರ ಬಗ್ಗೆ ತಾವೇ ಹೇಳಿದ್ದೀರಿ; ಮಳೆ ಬಂದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಹಾಗಾದರೆ ಪ್ರಯೋಜನ ಇರುವುದಿಲ್ಲ. ದುಡ್ಡು ಎಲ್ಲ ವಿಧಾನಸೌಧದಲ್ಲೇ ಇರುತ್ತದೆ.

ಶ್ರೀ ಸಿ. ಬೈರೇಗೌಡ: ಆದ್ದರಿಂದ ಐದು-ಹತ್ತು ಲಾರಿಗಳು, ಟ್ರಾಕ್ಟರ್‌ಗಳನ್ನು ಇಟ್ಟುಕೊಂಡರೆ ಆಗುವುದಿಲ್ಲ. ನೂರಾರು ಲಾರಿಗಳು, ನೂರಾರು ಟ್ರಾಕ್ಟರ್‌ಗಳನ್ನು ಇಟ್ಟುಕೊಂಡು ಕೆಲಸ ನಡೆಸಿದರೆ ಹದಿನೈದು ದಿವಸ ಅಥವಾ ಒಂದು ತಿಂಗಳು ಕೆಲಸ ನಡೆಯಬಹುದು, ಅಷ್ಟೆ. ಅದಕ್ಕಿಂತ ಮುಂದೆ ಹೂಳು ಎತ್ತುವ ಕಾರ್ಯಕ್ರಮ ನಡೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಮ್ಮ ಮಾತಿಗೆ ಕೂಡ ಮಾನ್ಯ ಮಂತ್ರಿಗಳು ಬೆಲೆಕೊಟ್ಟು ಒಂದು ಕೋಟಿರೂಪಾಯಿಯನ್ನು ಹೂಳು ಎತ್ತುವುದಕ್ಕೆ ಕೊಡಬೇಕು. ಉಳಿದುದಕ್ಕೆ ನಾಳೆ ಸಮಗ್ರವಾದಂಥ ಉತ್ತರವನ್ನು ಮಂತ್ರಿಗಳು ಕೊಡಲಿ. ಆದರೆ ಒಂದು ಕೋಟಿರೂಪಾಯಿಯನ್ನು ಹೂಳು ಎತ್ತುವುದಕ್ಕೆ ಮಾತ್ರ ಇವತ್ತಿನ ದಿವಸವೇ ಬಿಡುಗಡೆ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಹೇಳಿ ನಮ್ಮೆಲ್ಲರಿಗಿಂತ ಬಲವಾದಂಥ ಧ್ವನಿ ತಮ್ಮದು. ತಮ್ಮ ಧ್ವನಿಗೆ ಅವರು ಬೆಲೆ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು: ಒಂದು ಕೋಟಿ ರೂಪಾಯಿ ಕೊಟ್ಟರೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಸಿ. ಬೈರೇಗೌಡ: ಕೂಡಲೇ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳಿ ಮತ್ತೊಮ್ಮೆ ಅವರನ್ನು ವಿನಂತಿಸುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಮಾನ್ಯ ಭೈರೇಗೌಡರೇ, ಕಳೆದ ಐದು ವರ್ಷಗಳಿಂದ ಕೋಲಾರ ಧ್ವನಿಯಲ್ಲೇ ಸ್ವಾಮಿ, ತಾವು ಇರುವುದು. 6ನೇ ವರ್ಷವೂ ಕೋಲಾರದ ಧ್ವನಿಯೇ ನಡೆಯುತ್ತಿದೆಯಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಮಂತ್ರಿ): ಅಧ್ಯಕ್ಷರೇ, ಈಗ ಬಹಳ ತ್ವರಿತಗತಿಯಿಂದ ಆದಷ್ಟು ಶೀಘ್ರವಾಗಿ ಹೂಳು ಎತ್ತುವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಬಹಳ ಒತ್ತಾಯ ಮಾಡಿದ್ದಾರೆ. ಇದೇ ರೀತಿ ನಾನು ಮಾನ್ಯ ಭೈರೇಗೌಡರಿಗೆ ಮತ್ತು ಶ್ರೀನಿವಾಸಗೌಡ ಅವರಿಗೆ ಸರಿಯಾದಂಥ ವಿವರಗಳನ್ನು ನಾಳೆ ಒದಗಿಸುತ್ತೇನೆ. ತಮಗೆ ತೃಪ್ತಿ ತರುವಂಥ ಕೆಲಸವನ್ನು ಕೂಡ ನಾವು ಮಾಡುತ್ತೇವೆ. ನಿಮಗೆ ತೃಪ್ತಿ ತರತಕ್ಕಂಥ ಸುಧೀರ್ಘವಾದ ಉತ್ತರವನ್ನು ನಾಳೆ ಕೊಡುತ್ತೇನೆ.

ಅಧ್ಯಕ್ಷರು: ಹೂಳು ಎತ್ತುವುದು ಶ್ರೀ ಕುಮಾರ ಬಂಗಾರಪ್ಪ ಅವರಿಗೆ ಸೇರಿದ್ದು.

ಶ್ರೀ ಸಿ. ಬೈರೇಗೌಡ: ಇವುಗಳು ಸಣ್ಣ ನೀರಾವರಿಗೆ ಒಳಪಟ್ಟಿರತಕ್ಕಂಥ ಕೆರೆಗಳು ಅಲ್ಲ. ಇದು ನಗರಾಭಿವೃದ್ಧಿ ಇಲಾಖೆಗೆ ಸೇರಿದ ಕೋಲಾರ ಮುನಿಸಿಪಾಲಿಟಿಗೆ ಸೇರಿರತಕ್ಕಂಥ ಕೆರೆಗಳು, ಇದು ಇವರಿಗೇ ಬರುತ್ತದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ ಏನೆಂದರೆ ಇದು ತಮಗೆ ಸಂಬಂಧಪಟ್ಟಿರತಕ್ಕಂಥ ಕೆರೆಗಳು ಆಗಿರುವುದರಿಂದ ದಯಮಾಡಿ ತಾವು ಹಣ ಕೊಟ್ಟರೆ ನಾಳೆಯೇ ಕನಿಷ್ಠ ಪಕ್ಷ 50 ಟ್ರಾಕ್ಟರ್‌ಗಳು ಅಥವಾ 100 ಟ್ರಾಕ್ಟರ್‌ಗಳನ್ನು ತಂದು ಅಲ್ಲಿ ಮಣ್ಣೆತ್ತುವ ಕೆಲಸವನ್ನು ಮಾಡುತ್ತಾರೆ. ಟ್ರಾಕ್ಟರ್‌ಗಳು ಸಿಗದೇ ಇದ್ದರೆ ಲಾರಿಗಳಲ್ಲಾದರೂ ಕೂಡ ಮಣ್ಣನ್ನು ಸಾಗಿಸುವ ಕೆಲಸ ಆಗಬೇಕಾಗುತ್ತದೆ. ಆದ್ದರಿಂದ ನಾನು ಹೇಳತಕ್ಕದ್ದು ಏನೆಂದರೆ ನೀವು ಇವತ್ತು ಆಶ್ವಾಸನೆಯನ್ನು ಕೊಟ್ಟರೆ ಮಾನ್ಯ ಶ್ರೀನಿವಾಸಗೌಡರು ಇವತ್ತೇ ಕಾರ್ಯಕ್ರಮವನ್ನು ಹಾಕಿಕೊಂಡು ಅದಕ್ಕೆ ವ್ಯವಸ್ಥೆ ಮಾಡತಕ್ಕಂಥ ಕೆಲಸ ಮಾಡುತ್ತಾರೆ.

ಅಧ್ಯಕ್ಷರು: ಅವರು ಪ್ರಾರಂಭ ಮಾಡಿಸಿಬಿಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ: ಕೆಲಸ ನಡೆಯುತ್ತಿದೆ. ಅದಕ್ಕೆ ಇನ್ನೂ ಹೆಚ್ಚಿನ ಒತ್ತನ್ನು ಕೊಟ್ಟಹಾಗೆ ಆಗುತ್ತದೆ; ದಯಮಾಡಿ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇನೆ ಎಂದು ಆಶ್ವಾಸನೆ ಕೊಡಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಎಷ್ಟು ಬಿಡುಗಡೆ ಮಾಡುತ್ತೇನೆ, ಏನು ಕ್ರಮ ತೆಗೆದುಕೊಂಡಿದ್ದೇವೆ ತಮಗೆ ತೃಪ್ತಿ ತರತಕ್ಕಂಥ ಕೆಲಸ ಮಾಡುತ್ತೇವೆ ಎಂದು ನಾಳೆ ಹೇಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ: ಹೂಳು ಎತ್ತುವುದಕ್ಕೆ ದುಡ್ಡು ಕೊಡಿ ಸ್ವಾಮಿ.

ಅಧ್ಯಕ್ಷರು: ನಾಳೆ ಹೇಳುತ್ತೇನೆ ಎಂದು ಅವರು ಆಶ್ವಾಸನೆ ಕೊಟ್ಟಿದ್ದಾರೆ. ನಿಮಗೆ ತೃಪ್ತಿ ಬರುವ ಹಾಗೆ ಆಶ್ವಾಸನೆಯನ್ನು ನಾಳೆ ಕೊಡುತ್ತೇನೆ ಎಂದು ಹೇಳಿದ ಮೇಲೆ ಇನ್ನೂ ಏಕೆ ಮಾತನಾಡುತ್ತೀರಿ ?

ಶ್ರೀ ಕೆ. ಶ್ರೀನಿವಾಸಗೌಡ: ಕೆಲಸ ಶುರುಮಾಡಬಹುದೇ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ನಿಮ್ಮ ಹತ್ತಿರ ಹಣ ಹೆಚ್ಚಾಗಿ ಇದ್ದರೆ ಕೆಲಸ ಶುರು ಮಾಡಿಸಿ. ಆಮೇಲೆ ನಿಮಗೆ ಹಣ ಕೊಡುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ: ಆಗಬಹುದು. ಅವರು ಹೇಳಿದರೆ ಕೆಲಸ ಶುರು ಮಾಡಿಸುತ್ತೇನೆ. ನನಗೇನೂ ತೊಂದರೆಯಾಗುವುದಿಲ್ಲ.

ಅಧ್ಯಕ್ಷರು: ಆಯಿತು ' ಈಗ ಮಾನ್ಯ ಸಿಂಧ್ಯಾರವರು ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣಾ ಪ್ರಸ್ತಾವದ ಬಗ್ಗೆ ಭಾಷಣವನ್ನು ಮುಂದುವರೆಸಬೇಕು.

12.20 ಪಿ.ಎಂ.

6. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರಿದ ಚರ್ಚೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ವಾಸ್ತವಿಕವಾಗಿ ಒಂದೆರಡು ಮಾತುಗಳನ್ನು ಹೇಳಿದೆ. ಮೊದಲನೆಯದಾಗಿ, ಈ ಸರ್ಕಾರ ಬಂದಮೇಲೆ ಇದು ಎರಡನೇ ರಾಜ್ಯಪಾಲರ ಭಾಷಣ. ಮಾನ್ಯ ರಾಜ್ಯಪಾಲರು ಸೊಗಸಾಗಿ ಕನ್ನಡದಲ್ಲಿ ಮಾತನಾಡಿ ಐತಿಹಾಸಿಕವಾದ ಈ ಸದನದಲ್ಲಿ, ಇತಿಹಾಸದ ದಾಖಲೆಯನ್ನು ಉಂಟುಮಾಡಿ, ಕರ್ನಾಟಕದ ಜನಮನವನ್ನು ಗೆದ್ದಿರತಕ್ಕ ಪ್ರಥಮ ಮಹಿಳಾ ರಾಜ್ಯಾಪಾಲರು ಎಂಬ ಹೆಗ್ಗಳಿಕೆಯ ಜೊತೆಗೆ ಪ್ರಥಮ ಕನ್ನಡೇತರ ರಾಜ್ಯಪಾಲರ ಪೈಕಿ ಕನ್ನಡದಲ್ಲಿ ಮಾತನಾಡಿರತಕ್ಕ ಪ್ರಥಮ ರಾಜ್ಯಪಾಲರು ಎಂಬ ಕೀರ್ತಿಗೆ ಒಳಗಾಗಿದ್ದಾರೆ. ಅದಕ್ಕಾಗಿ ನಾನು ಮಾಯ್ಯ ರಾಜ್ಯಪಾಲರನ್ನು ಅಭಿನಂದಿಸುತ್ತೇನೆ. ಆದರೆ, ಈ ಸದನದಲ್ಲಿ ನಡೆಯುತ್ತಿರತಕ್ಕ ವ್ಯವಹಾರಗಳು, ಇದಕ್ಕೆ ವಿರೋಧಾಭಾಸವಾಗಿ, ಕನ್ನಡದಲ್ಲಿ ವ್ಯವಹಾರಗಳನ್ನು ನಡೆಸುತ್ತಾ ಇಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆ. ಕನ್ನಡದಲ್ಲಿ ವ್ಯವಹಾರ ನಡೆಸಿ, ಕನ್ನಡದಲ್ಲಿ ಮಾತನಾಡಿ ಕನ್ನಡದಲ್ಲಿ ಶ್ವೇತಪತ್ರವನ್ನು ಹೊರಡಿಸಿ, ಕನ್ನಡದಲ್ಲಿಯೇ ಹೇಳಿಕೆಗಳನ್ನು ನೀಡಿ ಎಂದು ಪರಿಪರಿಯಾಗಿ ಬೇಡುವ ಪರಿಸ್ಥಿತಿ ನಮ್ಮದಾಗಿದೆ. ಇನ್ನು ಮಂತ್ರಿಗಳು ಈ ಸಭೆಗೆ ಬರುವುದೇ ನಮಗೆ ಮಾಡುವಂಥ ಒಂದು ದೊಡ್ಡ ಉಪಕಾರ ಎನ್ನುವುದಾಗಿದೆ. ಮೊದಲನೇ ಸಾಲಿನಲ್ಲಿ ಮಾನ್ಯ ಶ್ರೀಕಂಠಯ್ಯನವರೊಬ್ಬರನ್ನು ಬಿಟ್ಟರೆ ಬೇರೆ ಯಾವುದೇ ಮಂತ್ರಿಗಳೂ ಇಲ್ಲ. ಇದು ನಮಗೆ ಕೊಡತಕ್ಕಂಥ ಗೌರವ. ಮಂತ್ರಿಗಳು ಈ ಸಭೆಗೆ ಬರುವುದೇ ನಮಗೆ ಮಾಡುವಂಥ ದೊಡ್ಡ ಉಪಕಾರವಾದರೆ ಕನ್ನಡದಲ್ಲಿ ಈ ಮಹನೀಯರು ಮಾತನಾಡತಕ್ಕಂತಾದ್ದು, ನಮಗೆ ತೋರತಕ್ಕ ದಯೆಯೇ ಸರಿ ಎಂದು ನಾನು ಭಾವಿಸಿದ್ದೇನೆ. ಅದೇನೇ ಇರಲಿ, ಕೊನೇಪಕ್ಷ ಮಾನ್ಯ